ದಂಡ ನಿಶ್ಚಿತ ಎಂದು ಅಶರೀರವಾಣಿಯಾಯಿತು. ಎಂದೂ ಕಾಣದ ತಾಯಿ ಸ್ಪರ್ಶದಿಂದ ಕರ್ಣ ಮೈ ಮರೆತು, 'ತೊಟ್ಟ ಬಾಣ ತೊಡಲಾರೆ' ಎಂದು ಭಾಷೆ ಕೊಟ್ಟು ಅಮ್ಮನ ಸಂತೃಪ್ತಿಗೊಳಿಸಿದ. ಭಾಷೆ ಪಡೆದು ಅರ್ಜುನನ ತಲೆ ಕಾಯ್ದ ತೃಪ್ತಿಯಲ್ಲಿ ಕುಂತಿ ಪರದೆ ಹಿಂದೆ ಸರಿದಳು. ಅಮ್ಮನ ಅಪ್ಪುಗೆಯಿಂದ ಹೊರ ಬಂದ ಕರ್ಣ ಎಚ್ಚೆತ್ತು, ತಾನು ಕೊಟ್ಟ ಭಾಷೆ ಪರಿಣಾಮ ನೆನೆದು ದುರ್ಯೋಧನ 'ಈಗಲೀಗ ನೀನು ಕೆಟ್ಟೆ' ಎಂದ. ಪರದೆ ಮೇಲೆದ್ದು ಕರ್ಣಾರ್ಜುನರ ಯುದ್ಧಕ್ಕೆ ಭೂಮಿ ಸಿದ್ದವಾಗಿ ಇಬ್ಬರ ರಥಗಳು ಎದುರಾಗಿ ಅರ್ಜುನ ರೋಷಾವೇಶದಿಂದ:

ಕುಲವನರಿಯದೆ ಅತಿ ಮಧದಿಂದಲೀ
ಏಕಿಂತು ಮೆರೆವೆ ಅಧಮ ಅಧಮ
ಮದಾಂಧ... ಏನು ಬೊಗಳಿದೆ... ಆಂ...
ಹೂಂಕರಿಸಿದ ಕರ್ಣ
ಕುಲವನಿಂದಿಸಿದ ಅತಿ ಮದಾಂಧನ
ಬಲವ ಮುರಿವೆನೀಗ ಛಲದೀ ಬಲದೀ

(ಕಾಕತಾಳೀಯ ಎಂಬಂತೆ ಇಬ್ಬರೂ ಪಾತ್ರಧಾರಿಗಳ ಹುಟ್ಟಿನ ರಹಸ್ಯ ತಿಳಿದಿದ್ದ ಕೆಲ ಪ್ರೇಕ್ಷಕ ಗಣ್ಯರು ಮುಸಿನಕ್ಕದ್ದು ಯಾರ ಗಮನಕ್ಕೂ ಬರಲಿಲ್ಲ.)

ಕರ್ಣಾರ್ಜುನ ಇಬ್ಬರೂ ದೇವರ ವರಪ್ರಸಾದದಿಂದ ಹುಟ್ಟಿದವರು ಎಂಬ ಗುಟ್ಟು ತಿಳಿಯದ ಪಾತ್ರಧಾರಿಗಳು ಒಬ್ಬರನ್ನೊಬ್ಬರು ಹೀಗಳೆದು ವಾದ ಮಾಡಿದರು. ತನ್ನ ಕುಲದ ಬುಡಕ್ಕೆ ಕೈ ಹಾಕಿ ಮಾತಾಡಿದ ಅರ್ಜುನನ ಮೇಲೆ ಕರ್ಣ ಕಡು ಕೋಪಗೊಂಡ. ಕೋಪ ತಣಿಸಲು ಬತ್ತಳಿಕೆಯಲ್ಲಿದ್ದ ಮುಖ್ಯ ಬಾಣ ಹೂಡಿದ. ಕರ್ಣ ಹೂಡಿದ ಬಾಣ ಹುಸಿಯಾಗದೆಂಬ ರಹಸ್ಯ ತಿಳಿದಿದ್ದ ಕೃಷ್ಣ; ತನ್ನ ಮಾಮೂಲಿ ಕಪಟ ಬುದ್ಧಿ ಬಳಸಿದ. ಭೂಮಂಡಲ ಕ್ಷಣ ಕಾಲ ತನ್ನ ಕಾಲಲ್ಲಿ ಅದುಮಿಡಿದು: ಕರ್ಣನ ಗುರಿ ತಪ್ಪುವಂತೆ ಮಾಡಿದ. ಎಂದೂ ಹುಸಿಯಾಗದ ಕರ್ಣನ ಗುರಿ ಅರ್ಜುನನ ಶಿರಸ್ಸಿಗೆ ಬದಲು ಕಿರೀಟ ಎಗರಿಸಿತು. ತನ್ನ ಕಣ್ಣೆದುರೇ ನಡೆದ ಕುಯುಕ್ತಿ ಕಂಡ ಕರ್ಣನ ಸಾರಥಿ ಶಲ್ಯ ಉರಿಗಣ್ಣಾದ. ತೊಟ್ಟ ಬಾಣ ಮತ್ತೆ ತೊಡಲು ಕರ್ಣನಿಗೆ ಆಜ್ಞಾಪಿಸಿದ. ಯುದ್ಧ ಭೂಮಿಯಲ್ಲಿ ಹೆತ್ತಮ್ಮಗೆ ಕೊಟ್ಟ ಭಾಷೆ ಕರ್ಣನ ಕಣ್ಮುಂದೆ ಬಂತು. 'ತೊಟ್ಟ ಬಾಣ ತೊಡಲಾರೆ, ಕೊಟ್ಟ ಭಾಷೆ ತಪ್ಪಲಾರೆ' ಎಂದ. ಕರ್ಣನ ಮಾತಿಂದ ಕೆರಳಿದ ಶಲ್ಯ ರಥ ಬಿಟ್ಟಿಳಿದ. ಯುದ್ಧ ಭೂಮಿಯಲ್ಲಿ ಕರ್ಣ ಏಕಾಂಗಿಯಾದ. ಅದೇ ಸಮಯಕ್ಕೆ ಕರ್ಣನ ರಥದ ಚಕ್ರ ಭೂಮಿಗಿಳಿಯಿತು. 'ರಥದ ಚಕ್ರ ಮೇಲೆತ್ತುವವರೆಗೆ ಬಾಣ ಹೂಡ ಬೇಡ' ಎಂದ ಕರ್ಣ, ರಥದ ಚಕ್ರ ಎತ್ತತೊಡಗಿದ. ತನ್ನ ವರ ಪ್ರಸಾದದಿಂದ ಹುಟ್ಟಿದ ಮಗ ಅರ್ಜುನನ ಶಿರ ಕಾಯಲು ದೇವೇಂದ್ರ ಸಮಯ ಸಾಧಿಸಿ ಸನ್ಯಾಸಿಯಾಗಿ ರಣರಂಗದಲ್ಲಿ ಕರ್ಣನ ಮುಂದೆ ಪ್ರತ್ಯಕ್ಷನಾದ. 'ದಾನಶೂರ ಕರ್ಣ' ಎಂದು ಹಾಡಿ ಹೊಗಳಿದ. ಬಿರುದಿಗೆ ತಕ್ಕ ದಾನ ಕೊಡಬೇಕೆಂದ. 'ಯುದ್ಧ ಭೂಮಿಯಲ್ಲಿ ಯಾವ ದಾನ ಕೊಡಲಿ' ಎಂದ ಕರ್ಣನ ಮಾತಿಗೆ, ಅವನಲ್ಲಿ ಕರ್ಣಕುಂಡಲ ಇರುವಷ್ಟು ಸಮಯ ಸಾವು ಸಂಭವಿಸದೆಂಬ ರಹಸ್ಯ ಅರಿತಿದ್ದ ಸನ್ಯಾಸಿ ವೇಷಧಾರಿ ದೇವೇಂದ್ರ, 'ನಿನ್ನ ಬಳಿಯರುವುದನ್ನೇ ಬೇಡುವೆ' ಎಂದ. ಕರ್ಣನಿಂದ ತಾನು ಬೇಡಿದ್ದು ಇಲ್ಲವೆನ್ನದೆ ನೀಡುವ ಭಾಷೆ ಪಡೆದ. ಕರ್ಣಕುಂಡಲ ಬೇಡಿ ಪಡೆದು ಮಾಯವಾದ. ರಥದ ಚಕ್ರ ಎತ್ತುತ್ತಲೇ ಕರ್ಣ ಅರ್ಜುನನ ಬಾಣಗಳಿಗೆ ತಕ್ಕ ಉತ್ತರ ನೀಡಿದ. ಮತ್ತೆ ಬಾಣ ಹೂಡಲು ಕರ್ಣ ಮಂತ್ರ ಜಪಿಸಿ ಧ್ಯಾನಸ್ಥನಾದ. ಧ್ಯಾನಸ್ಥ ಕರ್ಣನ ಶಿರ ಛೇದಿಸಲು ಇದೇ ಸರಿಯಾದ ಸಮಯ ಎಂದ ಕೃಷ್ಣ ಬಾಣ ಹೂಡಲು ಅರ್ಜುನನ ಒತ್ತಾಯಿಸಿದ. ಅರ್ಜುನ ಹೂಡಿದ ಬಾಣ ಕರ್ಣನ ತಲೆ ಕಡಿದು ನೆಲಕ್ಕುರುಳಿಸಿತು. ಕುಲವ ನಿಂದಿಸಿದವನ ಬಲವ ಮುರಿವ ಕರ್ಣನ ಶಪಥ ಮಾತ್ರ ಈಡೇರದಾಯಿತು. ಬೆಳಕರಿದು ಬಂದರೂ ನಾಟಕ ಮುಗಿಯದೆ ಹೂ ಬಿಸಿಲಲ್ಲೇ ಭೀಮ ದುರ್ಯೋಧನನ ತೊಡೆ ಮುರಿದು ದ್ರೌಪದಿಯ ಮುಡಿ ಕಟ್ಟಿ ನಾಟಕ ಮುಗಿಯಿತು.

ರಂಗಸ್ಥಳದಲ್ಲಿ ನಾಟಕ ಮುಗಿದರೂ ಅಭಿಮನ್ಯು ಪಾತ್ರಧಾರಿ ತಳವಾರ್ರ ರೊಡ್ಡಯ್ಯನ ಮನೆ ಮುಂದೆ ಜಾತ್ರೆಯಂತೆ ಜನ ಸೇರಿ ನಿಜ ನಾಟಕವೇ ನಡೆದಿತ್ತು. ಕುರುಕ್ಷೇತ್ರ ನಾಟಕ ಕಳೆಗಟ್ಟಲೆಂದು ರೊಡ್ಡಯ್ಯ ಉತ್ತರೆ ಪಾತ್ರಕ್ಕೆ ಟುಮಕಿಪುರದ ಉಳ್ಳು ಬೆಳ್ಳಗಿನ ವೈಯಾರದ ಹೆಣ್ಣು ಪಾತ್ರಧಾರಿ ಕರೆಸಿದ್ದ. 'ರೊಡ್ಡಯ್ಯನಂತೆ ನಟಿಸುವಾತ ಸುತ್ತೇಳು ಹಳ್ಳಿಯಲ್ಲೇ



